ಮಿಸ್ಲೇನಿಯಸ್. ನಂಃ 19/2019
ಆರ್.ಡಬ್ಲ್ಯೂ-1 (ಬಸವರಾಜ)

ದಿನಾಂಕ: 17-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ಪಿ.ಎಮ್.ಎಚ್. ಎದುರುದಾರ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಸರ್ವೆ ನಂ.474 ರ 11-ಇ ನಕಾಶೆ ಮಾಡಿಕೊಡಲು ಕೊಟ್ಟ ಅರ್ಜಿಯನ್ನು ನಿ.ಆರ್-1, ನೋಟೀಸನ್ನು ನಿ.ಆರ್-2 ಮತ್ತು 3, ವಾಸಪ ಆದ ಅಂಚೆ ಲಕೋಟೆಗಳ ಧೃಡೀಕೃತ ನಕಲುಗಳನ್ನು ನಿ.ಆರ್-4 ರಿಂದ 7, ಅಂಚೆ ರಸೀದಿಗಳ ಧೃಡೀಕೃತ ನಕಲುಗಳನ್ನು ನಿ.ಆರ್-8, ಹೇಳಿಕೆಯ ಧೃಡೀಕೃತ ನಕಲನ್ನು ನಿ.ಆರ್-9, 11-ಇ ನಕಾಶೆ ಧೃಡೀಕೃತ ನಕಲನ್ನು ನಿ.ಆರ್-10, ಚಕಬಂದಿ ವಿವರವನ್ನು ನಿ.ಆರ್-11, ಸರ್ವೆ ನಂ.474 ರ 2025-26ನೇ ಸಾಲಿನ ಪಹಣಿ ಪತ್ರಿಕೆಯನ್ನು ನಿ.ಆರ್-12 ಎಂದು ಗುರುತಿಸಲಾಯಿತು. ಆದ್ದರಿಂದ ಈ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀಸವಾಲುಃ ಶ್ರೀ.ಡಿ.ಬಿ.ಎ. ಅರ್ಜಿದಾರ ಪರ ವಕೀಲರಿಂದಃ**

ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ